

# ಅನಂತಕುಮಾರ್

## ಐದು ವರ್ಷಗಳ ಸಾಧನೆಯ ಹಾದಿ

- ಬೆಂಗಳೂರಿನ ಸರ್ವಾಂಗೀಣ ಬೆಳವಣಿಗೆಗೆ 'ಅಬೈಡ್' ಮೂಲಕ ಚಾಲನೆ; ಹತ್ತು ಹಲವು ವಿನೂತನ ಯೋಜನೆಗಳ ಜಾರಿ.
- ಬೆಂಗಳೂರಿನಲ್ಲೀಗ ಅತ್ಯಾಧುನಿಕ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ. ಸಿಲಿಕಾನ್ ಸಿಟಿಯೀಗ ಜಾಗತಿಕ ನಕಾಶೆಯಲ್ಲಿ ದೊಡ್ಡ ಹೆಸರು.
- ರಾಜಧಾನಿಯಲ್ಲಿ ವಿಶ್ವಸ್ತರದ ಮೆಟ್ರೋ ರೈಲು ಜಾಲಕ್ಕೆ ಚಾಲನೆ. ಬೆಂಗಳೂರಿನಿಂದ 23 ಹೊಸ ರೈಲುಗಳ ಆರಂಭ. ಯಶವಂತಪುರ ಟರ್ಮಿನಲ್ ಕಾರ್ಯಾರಂಭ. ನಗರದ ಹಲವು ಬಡಾವಣೆಗಳಲ್ಲಿ ಟಿಕೆಟ್ ಕೌಂಟರ್‌ಗಳು.
- ಬೆಂಗಳೂರಿನ ರಸ್ತೆ, ಮೇಲ್‌ಸೇತುವೆ, ಫ್ಲೈ ಓವರ್‌ಗಳ ನಿರ್ಮಾಣಕ್ಕೆ 2693 ಕೋಟಿ ರೂ.ಗಳ ಹುಡ್ಕೋ ನೆರವು. ಕಾವೇರಿ ನೀರು, ಶಿರಸಿ ಫ್ಲೈ ಓವರ್, ಕೃಷ್ಣರಾಜಪುರ ಸೇತುವೆ, ಮೇಖ್ರಿ ಫ್ಲೈ ಓವರ್ – ಎಲ್ಲದಕ್ಕೂ ಹುಡ್ಕೋ ನೆರವು ಶೇ. 75ರಷ್ಟು ಹೆಚ್ಚಳ.
- ಸಂಸತ್ ಸದಸ್ಯರ ನಿಧಿಯೆಲ್ಲವೂ ಆಸ್ಪತ್ರೆ, ಕುಡಿಯುವ ನೀರು, ಕೊಳವೆ ಬಾವಿಗಳ ನಿರ್ಮಾಣ, ಶಾಲಾ ಕೊಠಡಿ, ಸಮುದಾಯ ಭವನ – ಹೀಗೆ ಜನೋಪಯೋಗಿ ಕಾರ್ಯಗಳಿಗೆ ಹಲವು ಕೋಟಿ ರೂ. ನೀಡಿಕೆ.
- ಬೆಂಗಳೂರಿನ 330 ಸರ್ಕಾರಿ ಶಾಲೆಗಳ 80 ಸಾವಿರ ಮಕ್ಕಳಿಗೆ ಕೇಂದ್ರ – ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ದಿನವೂ ಶುಚಿ –ರುಚಿಯಾದ ಮಧ್ಯಾಹ್ನದ ಬಿಸಿಯೂಟ ಸರಬರಾಜು.
- ಬೆಂಗಳೂರಿನ ವಿವಿಧ ಕೊಳಚೆಗೇರಿ ಪ್ರದೇಶಗಳಲ್ಲಿ 5000ಕ್ಕೂ ಹೆಚ್ಚು ಮನೆಗಳ ನಿರ್ಮಾಣ. ಬೆಂಗಳೂರಿನ ವಿವಿಧ ಮೂಲಭೂತ ವ್ಯವಸ್ಥೆಗೆ ಹುಡ್ಕೋನಿಂದ ಒಂದು ಸಾವಿರ ಕೋಟಿ ರೂ.ಗಳ ದಾಖಲೆ ನೆರವು; ಉದ್ಯಾನವನಗಳು, ಶೌಚಾಲಯಗಳು, ಪಾದಚಾರಿ ರಸ್ತೆಗಳು, ಕೆರೆಗಳ ಹೂಳೆತ್ತುವಿಕೆ – ಹೀಗೆ ನೂರಾರು ಕಾರ್ಯಗಳ ಯಶಸ್ವೀ ನಿರ್ವಹಣೆ.
- ಜನಸಾಮಾನ್ಯರ ಅರ್ಜಿ – ಅಹವಾಲುಗಳಿಗೆ ತಕ್ಷಣದ ಸ್ಪಂದನ; ಮುಖ್ಯಮಂತ್ರಿ ಪರಿಹಾರ ನಿಧಿ, ಪ್ರಧಾನಮಂತ್ರಿಗಳ ಪರಿಹಾರ ನಿಧಿಗಳಿಂದ ನೆರವು ದೊರಕಿಸುವ ನಿರಂತರ ಕಾಯಕ.
- ಕಾವೇರಿ, ರೈಲ್ವೆ, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ, ರಾಜ್ಯಕ್ಕೆ ಬರಬೇಕಾದ ಯೋಜನೆಗಳು, ದೇಶದ ಆರ್ಥಿಕ ಸ್ಥಿತಿ, ಮಹಾಜನ್ ವರದಿ, ನೀರಾವರಿ ಯೋಜನೆ, ಬೆಳೆ ವಿಮೆ, – ಹೀಗೆ ಲೋಕಸಭೆಯಲ್ಲಿ 62 ಸಲ ಮಾಹಿತಿಪೂರ್ಣ ಭಾಷಣಗಳು; ನಾಡು–ನುಡಿಗಾಗಿ ನಿರಂತರ ಹೋರಾಟ .

ಒಂದು ಮತ ONE VOTE एक वोट

ಇಂದಿನ ನವಪೀಳಿಗೆಯ ನಾಗರಿಕರಾದ ನೀವು ಪ್ರಜಾಪ್ರಭುತ್ವದ ಮಹತ್ವದ ಪ್ರಕ್ರಿಯೆಯಾದ ಚುನಾವಣೆಯಲ್ಲಿ ಮತದಾನ ಮಾಡಿ. ಮತದಾರರಾಗಿ ನೋಂದಾವಣೆ ಮಾಡಿಕೊಳ್ಳಲು **www.ananth.org** ಈ ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆಯಿರಿ.

# ಭಾರತೀಯ ಜನತಾ ಪಾರ್ಟಿ

**ಲೋಕಸಭಾ ಚುನಾವಣೆ**

23 ಏಪ್ರಿಲ್ 2009



ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

# ಅನಂತಕುಮಾರ್

## ಪ್ರಿಯ ಮತದಾರರೆ,

ಶ್ರೀ ಅಟಲ್‌ಜಿ ನೇತೃತ್ವದ ಕೇಂದ್ರ ಸರ್ಕಾರದ ಅವಧಿಯಲ್ಲಿ ಭಾರತ ಸುವರ್ಣಯುಗವನ್ನು ಕಂಡಿತ್ತು. ಪರಮಾಣು ಶಕ್ತಿಯುತ ದೇಶವಾಗಿ ಮೂಡಿತ್ತು; ಆರ್ಥಿಕವಾಗಿ ಬಲಶಾಲಿಯಾಗಿತ್ತು. ಆದರೆ...

**ಕಾಂಗ್ರೆಸ್ ಕೇಂದ್ರಸರ್ಕಾರದ ದುರಾಡಳಿತದಲ್ಲಿ ಕಂಡಿದ್ದೇನು?**

**ಭಯೋತ್ಪಾದನೆಯ ಸಂಕಟ**
ಎಲ್ಲೆಡೆ ಸರಣಿ ಬಾಂಬ್ ಸ್ಫೋಟ; ನಕ್ಸಲರ ಅಟ್ಟಹಾಸ.

**ಆರ್ಥಿಕ ಸಂಕಟ**
ಆಹಾರವಸ್ತುಗಳ ಬೆಲೆ ಶೇ. 200 ಹೆಚ್ಚಳ; ನಿರುದ್ಯೋಗ ಸ್ಫೋಟ: ಆರ್ಥಿಕ ಹಿಂಜರಿತ.

**ಕೃಷಿ ಸಂಕಟ**
ತುತ್ತು ಕೂಳಿಗೆ ಬರ. ಪ್ರತಿ ವರ್ಷ ಲಕ್ಷಾಂತರ ರೈತರ ದಾರುಣ ಆತ್ಮಹತ್ಯೆ.

**ಸಾಂಸ್ಕೃತಿಕ ಸಂಕಟ**
ಅಲ್ಪ ಸಂಖ್ಯಾತರ ತುಷ್ಟೀಕರಣದ ನೀತಿ;

**ಪ್ರಜಾತಂತ್ರದ ಸಂಕಟ**
ಶಿಥಿಲವಾದ ಪ್ರಜಾತಂತ್ರ ವ್ಯವಸ್ಥೆ; 'ಕೈಗೊಂಬೆ ಪ್ರಧಾನಮಂತ್ರಿ' ಕಾಲ! ಸಂವಿಧಾನಬಾಹಿರ 'ನಾಯಕೀ ನಿಯಂತ್ರಣ'ದ ಕಾರುಬಾರು.

ನೀವೀಗ ಸಾಕ್ಷಿಯಾಗಿದ್ದೀರಿ: ಕರ್ನಾಟಕದಲ್ಲಿ ಭಾರತೀಯ ಜನತಾ ಪಾರ್ಟಿಯ ಜನಪರ ಆಡಳಿತಕ್ಕೆ.
ಒಂದು ಕ್ಷಣ ದೇಶಕ್ಕಾಗಿ ಚಿಂತಿಸಿ. ಹೊಣೆಯರಿತು ಮತ ಚಲಾಯಿಸಿ ಅನಂತಕುಮಾರ್‌ಗೆ, ಕಮಲದ ಗುರುತಿಗೆ ಮತ ನೀಡಿ.
ಶ್ರೀ ಎಲ್.ಕೆ. ಆಡ್ವಾನಿಯವರ ನೇತೃತ್ವದಲ್ಲಿ ದೇಶವನ್ನು ಮುನ್ನಡೆಸಲು ಜೊತೆಗೂಡಿ.

**ಬನ್ನಿ ಬಿಜೆಪಿಯನ್ನು ಗೆಲ್ಲಿಸಿ ಸಂಕಟಗಳ ಸರಮಾಲೆಯನ್ನು ಎದುರಿಸೋಣ. ಸದೃಢ ದೇಶ ಕಟ್ಟೋಣ.**

ದೇಶ ಮೊದಲು NATION FIRST
BJP IS THE BEST

**BJP**



ನೆಚ್ಚಿನ ಮಾಜಿ ಪ್ರಧಾನಿ
ಶ್ರೀ ಅಟಲ್‌ಜಿ

# ಶ್ರೀ ಅಟಲ್ ಬಿಹಾರಿ ವಾಜಪೇಯಿ

24 ರಾಜಕೀಯ ಪಕ್ಷಗಳ ಸಮ್ಮಿಶ್ರ ಸರ್ಕಾರ; ಐದು ವರ್ಷಗಳ ಕಾಲಾವಧಿ. 56 ವರ್ಷಗಳಿಂದ ಹೂತುಹೋಗಿದ್ದ ಅಭಿವೃದ್ಧಿಯ ಚಕ್ರ. ಶಿಥಿಲ ಆಡಳಿತ ವ್ಯವಸ್ಥೆ. ಕುಸಿದ ಜನವಿಶ್ವಾಸ. ಇವೆಲ್ಲವನ್ನೂ ಮೀರಿ ಅಂದಿನ ಪ್ರಧಾನಮಂತ್ರಿ, ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಮಾಡಿದ ಸಾಧನೆಗಳು ಐತಿಹಾಸಿಕ; ಅವಿಸ್ಮರಣೀಯ.



ನಮ್ಮ ರಾಷ್ಟ್ರೀಯ ನಾಯಕ
ಶ್ರೀ ಎಲ್.ಕೆ. ಅಡ್ವಾನಿ

- ಪೊಖ್ರಾನ್ ಅಣುಸ್ಫೋಟದ ಮೂಲಕ ಭಾರತಕ್ಕೆ ಸೂಪರ್ ಪವರ್ ಸ್ಥಾನಮಾನ.
- ಕಾರ್ಗಿಲ್‌ನಲ್ಲಿ ವಿದ್ರೋಹಿ – ಪಾಕ್ ಸಂಚಿಗೆ ತಕ್ಕ ಶಾಸ್ತಿ; ಹಿಮಾಲಯದಲ್ಲಿ ವಿಜಯಪತಾಕೆ.
- ಜಮ್ಮು – ಕಾಶ್ಮೀರದಲ್ಲಿ ನೂರಾರು ಭಯೋತ್ಪಾದಕರ ತಾಣಗಳ ಧ್ವಂಸ. ಲಕ್ಷಾಂತರ ಶಸ್ತ್ರಾಸ್ತ್ರ ವಶ.
- ಕುಸಿತದಿಂದ ತತ್ತರಿಸಿದ್ದ ಖಜಾನೆಗೆ ಐದೂವರೆ ಲಕ್ಷ ಕೋಟಿ ರೂ. ತುಂಬಿದ ಅಗ್ಗಳಿಕೆ.

  ಹಿಂದುಳಿದ, ಪರಿಶಿಷ್ಟ ಜಾತಿ ವರ್ಗದ 27 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ.
- ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಡಿ ಮನೆಗಳು; ಗೃಹಸಾಲ ಬಡ್ಡಿದರದಲ್ಲಿ ಇಳಿಕೆ.
- ಅಂತ್ಯೋದಯ ಯೋಜನೆಯಡಿ ಒಂದೂವರೆ ಕೋಟಿ ಬಡಕುಟುಂಬಗಳಿಗೆ ಕಿಲೋಗೆ 2 ರೂ. ಅಕ್ಕಿ, 3 ರೂ.ಗೆ ಗೋಧಿ, ತಿಂಗಳಿಗೆ 5 ಕಿಲೋ ಪಡಿತರ.
- ಮಹಿಳೆಯರಿಗೆ ಶೇ. 27ರಷ್ಟು ಮೀಸಲಾತಿ. ಭಾಗ್ಯಶ್ರೀ, ರಾಜರಾಜೇಶ್ವರಿ ವಿಮಾ ಯೋಜನೆಗಳು

  ದೇಶದೆಲ್ಲೆಡೆ ಸರ್ವಶಿಕ್ಷಾ ಅಭಿಯಾನದ ಕ್ರಾಂತಿ. 9500 ಕೋಟಿ ರೂ. ವೆಚ್ಚದಲ್ಲಿ ಹಳ್ಳಿ, ನಗರಗಳ ಶಾಲೆಗಳಿಗೆ ಸುಣ್ಣ, ಬಣ್ಣ; ಚಿಣ್ಣರ ಕಲಿಕೆಗೆ ಪ್ರೋತ್ಸಾಹ
- ಸ್ವರ್ಣ ಚತುಷ್ಕೋನ ರಾಷ್ಟ್ರೀಯ ಹೆದ್ದಾರಿ ; ಸ್ವಾತಂತ್ರ್ಯದ ಬಳಿಕ ಜಾರಿಯಾದ ಬೃಹತ್ ರಸ್ತೆ ಯೋಜನೆ.
- ಕರ್ನಾಟಕದ ಹಿತ ಕಾಯ್ದ ವಾಜಪೇಯಿ ಸರ್ಕಾರ: ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳಕ್ಕೆ ಅನುಮತಿ. ಹಲವು ನೀರಾವರಿ ಯೋಜನೆಗಳ ಮುನ್ನಡೆ. ಹುಬ್ಬಳ್ಳಿಯಲ್ಲಿ ನೈಋತ್ಯ ರೈಲ್ವೆ ವಲಯ ಸ್ಥಾಪನೆ. ಪ್ರವಾಸೋದ್ಯಮ ಕೇಂದ್ರಗಳಿಗೆ ವಿಶೇಷ ನೆರವು. ಕೃಷ್ಣರಾಜಪುರದಲ್ಲಿ ಏಷ್ಯಾದ ಅತಿದೊಡ್ಡ ವಿದ್ಯುತ್ ಗ್ರಿಡ್ ಸ್ಥಾಪನೆ; ಒರಿಸ್ಸಾದಿಂದ 1200 ಮೆಗಾವಾಟ್ ವಿದ್ಯುತ್ ಸರಬರಾಜು.
- ಮಾಹಿತಿ ತಂತ್ರಜ್ಞಾನ, ರಕ್ಷಣಾ ವೆಚ್ಚ, ಆಹಾರ ಉತ್ಪಾದನೆ, ಪ್ರವಾಸೋದ್ಯಮ, ವಿದೇಶಿ ನೇರ ಬಂಡವಾಳ, ಮೊಬೈಲ್ ಬಳಕೆ, ರಫ್ತು ವಹಿವಾಟು, ಇಂಟರ್‌ನೆಟ್ ಸಂಪರ್ಕ, ಗ್ರಾಮೀಣ ಉದ್ಯೋಗಗಳ ಸೃಷ್ಟಿ – ಎಲ್ಲದರಲ್ಲೂ ಸಾರ್ವಕಾಲಿಕ ದಾಖಲೆ. ಪ್ರತಿದಿನವೂ ಪ್ರಗತಿ.

ದೇಶ ಮೊದಲು NATION FIRST

ಭಾರತವನ್ನು ಸಮೃದ್ಧ, ಪರಮಾಣು ಶಕ್ತಿಯುತ ದೇಶವಾಗಿ ನಿರ್ಮಿಸಿದ ಶ್ರೀ ಅಟಲ್‌ಜಿಯವರ ಸಾಧನೆಯ ಇತಿಹಾಸ ಭಾರತದ ಸುವರ್ಣ ಅಧ್ಯಾಯ.



# ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ

ಶ್ರೀ ಬಿ.ಎಸ್. ಯಡ್ಯೂರಪ್ಪನವರ ಸಮರ್ಥ ನಾಯಕತ್ವದಲ್ಲಿ ಅಭಿವೃದ್ಧಿಯ ಹೊಸ ಪರ್ವ

- ಉದ್ಯೋಗಾವಕಾಶ ಹೆಚ್ಚಿಸಲು 'ಕೌಶಲ್ಯ ಅಭಿವೃದ್ಧಿ ಆಯೋಗ' ರಚನೆ. ಈ ಬಾರಿಯ ಬಜೆಟ್‌ನಲ್ಲಿ ಇದಕ್ಕಾಗಿ 100 ಕೋಟಿ ರೂ. ಮೀಸಲು
- 30 ಬೃಹತ್ ಉದ್ದಿಮೆಗಳಿಗೆ ಅನುಮೋದನೆ. ರೂ.30,184 ಕೋಟಿ ಬಂಡವಾಳ ಹೂಡಿಕೆ; 4 ಲಕ್ಷ ಉದ್ಯೋಗ ಸೃಷ್ಟಿ ನಿರೀಕ್ಷೆ. ರಾಜ್ಯದ ಹಲವೆಡೆ ವಿಮಾನ ನಿಲ್ದಾಣಗಳಿಗೆ ಚಾಲನೆ
- ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆ: ರೂ.205 ಕೋಟಿ ವೆಚ್ಚದಲ್ಲಿ 831 ಕೀ.ಮೀ. ರಸ್ತೆ ಅಭಿವೃದ್ಧಿಗೆ ಚಾಲನೆ. ರಾಜ್ಯಕ್ಕೆ ದೇಶದಲ್ಲೇ ಗುಣಮಟ್ಟದಲ್ಲಿ ಪ್ರಥಮ ಸ್ಥಾನ .
- ಛತ್ತೀಸ್‌ಗಢದಲ್ಲಿ ವಿದ್ಯುತ್ ಸ್ಥಾವರ ಸ್ಥಾಪನೆಗೆ ಚಾಲನೆ; ವಿಜಾಪುರದಲ್ಲಿ 4000 ಮೆಗಾವ್ಯಾಟ್ ಮತ್ತು ಗುಲ್ಬರ್ಗಾದಲ್ಲಿ 1320 ಮೆ.ವಾ. ಥರ್ಮಲ್ ವಿದ್ಯುತ್ ಸ್ಥಾವರ ಸ್ಥಾಪನೆಗೆ ಮಂಜೂರಾತಿ.ಹಲವು ಗ್ರಾಮಗಳಲ್ಲಿ 'ನಿರಂತರ ಜ್ಯೋತಿ' ಯೋಜನೆಯ ಯಶಸ್ವೀ ಪ್ರಯೋಗ.
- ಭಾಗ್ಯಲಕ್ಷ್ಮಿ, ಆರೋಗ್ಯ ಕವಚ, ಸಂಧ್ಯಾ ಸುರಕ್ಷಾ, ತಾಯಿ ಭಾಗ್ಯ, ಜನಸ್ಪಂದನದಂತಹ ವಿನೂತನ ಯೋಜನೆಗಳು. ಬಡವರು, ಆಶಕ್ತರು, ಮಹಿಳೆಯರು, ಪರಿಶಿಷ್ಟರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದವರಿಗೆ ನೆರವು.
- ಭಾಗ್ಯಲಕ್ಷ್ಮಿ ಯೋಜನೆಯ ಆರಂಭಿಕ ಠೇವಣಿ ದ್ವಿಗುಣ. ಅಂತಿಮ ಕೊಡುಗೆ ಮೊತ್ತ ರೂ.1 ಲಕ್ಷಕ್ಕೆ ಏರಿಕೆ, 1.19 ಲಕ್ಷ ಹೆಣ್ಣುಮಕ್ಕಳಿಗೆ ರೂ.119 ಕೋಟಿ ಮೊತ್ತದ ಬಾಂಡ್ ವಿತರಣೆ.
- ಶೇಕಡಾ 3ರ ಬಡ್ಡಿದರದಲ್ಲಿ 9 ಲಕ್ಷ ರೈತ ಸದಸ್ಯರಿಗೆ ರೂ.2773 ಕೋಟಿ ಕೃಷಿ ಸಾಲ ವಿತರಣೆ. ಸಾವಯವ ಕೃಷಿಗೆ ಭಾರೀ ಪ್ರೋತ್ಸಾಹ. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ರೂ.2/– ಪ್ರೋತ್ಸಾಹ ಧನ ಯೋಜನೆ ಜಾರಿ.
- ಗ್ರಾಮೀಣ ಪ್ರದೇಶಗಳಿಗೆ ರೂ.515 ಕೋಟಿ ವೆಚ್ಚದಲ್ಲಿ ಶುದ್ಧ ಕುಡಿಯುವ ನೀರು.

## 2009ರ ಬಜೆಟ್ ಮುಖ್ಯಾಂಶ

- ಶೇ. 3ರ ಬಡ್ಡಿ ದರದಲ್ಲಿ ರೈತರಿಗೆ ಬ್ಯಾಂಕ್ ಸಾಲ
- ಸಾವಯವ ಕೃಷಿಗಾಗಿ ಸಂಘಟನೆ
- ರೈತರಿಗೆ ವಿದ್ಯುತ್ ಸರಬರಾಜಿಗಾಗಿ 2100 ಕೋಟಿ
- ಕೃಷಿ ಮಾರುಕಟ್ಟೆ : ಬೆಂಬಲ ಬೆಲೆ ಒದಗಿಸಲು ರೂ.750 ಕೋಟಿ
- ಕೃಷ್ಣಾ ಮೇಲ್ದಂಡೆ ಯೋಜನೆಗಳ ತ್ವರಿತ ಅನುಷ್ಠಾನ
- ಭದ್ರಾ ಮೇಲ್ದಂಡೆ ಯೋಜನೆಗೆ ಚಾಲನೆ
- ಕೆರೆಗಳ ಅಭಿವೃದ್ಧಿಗೆ ವ್ಯವಸ್ಥಿತ ಯೋಜನೆ
- ಬೆಂಗಳೂರು ಅಭಿವೃದ್ಧಿಗೆ ಬೃಹತ್ ಯೋಜನೆ
- ಮೆಟ್ರೊ ಯೋಜನೆಯ ವಿಸ್ತರಣೆ